ಮೋಕ್ಷಮಾರ್ಗವಿದೆ. ಇಂಥ ಮೋಕ್ಷಮಾರ್ಗವು ಪ್ರಕಟವಾದ ನಂತರ ಬಾಹ್ಯದಲ್ಲಿ ಬೇಕಾದಂಥ ಉಪಸರ್ಗ ಬರಲಿ, ಗಾಣದ ದಿಂಡಿನಲ್ಲಿ ಹಾಕಿ ಹಿಂಡುತ್ತಿರುವ ಸಮಯದಲ್ಲಿ ಕೂಡ ಮುನಿರಾಜರುಗಳು ಅಂತರ್ಯದ ಅತೀಂದ್ರಿಯ ಆನಂದದಲ್ಲಿ ರಮಿಸುತ್ತಿರುತ್ತಾರೆ. ಯಾವನಾದರೂ ಪೂರ್ವಜನ್ಮದ ವಿರೋಧಿ ದೇವನು ಮುನಿರಾಜರನ್ನು ಎತ್ತಿಕೊಂಡು ಹೋಗಿ ಲವಣ ಸಮುದ್ರದಲ್ಲಿ ಎಸೆಯುವ ಸಮಯದಲ್ಲೂ ಆ ಸಾಧು ಪರಮೇಷ್ಠಿಗಳು ಶ್ರೇಣಿ ಮಂಡಿಸಿ ಕೇವಲಜ್ಞಾನ ಪಡೆದು ಸಿದ್ಧದಶೆಯನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ. ಅದಕ್ಕಾಗಿಯೇ ಒಂದು ಬಾರಿ ಚೈತನ್ಯ ರತ್ನಾಕರನ ಕಡೆಗೆ ದೃಷ್ಟಿ ಹರಿಸಿ ಅನುಭವ ಮಾಡಿಕೊಂಡರೆ ನಿನಗೆ ಯಾವ ಫಲವು ಪ್ರಾಪ್ತವಾಗುವುದಿಲ್ಲ, ಅಲ್ಪಕಾಲದಲ್ಲಿಯೇ ಸಿದ್ಧಪದ ಎಂದರೆ ಮುಕ್ತಿ ಪಡೆಯುವೆಯೆಂದು ಹೇಳುತ್ತಾರೆ.

ಲೋಕಾಲೋಕಗಳ ಪ್ರಕಾಶಕನಾದಂಥ ನಿಜ ಆತ್ಮನನ್ನು ಯಾರು ಅನುಭವಿಸುತ್ತಾರೆ ಅವರದು ಕೇವಲಜ್ಞಾನ ಪಡೆದುಕೊಳ್ಳುವ ಸಿದ್ಧತೆಯಾಗಿ ಹೋಗಿದೆಯೆಂದು ತಿಳಿಯಬೇಕು. ಇಂಥ ಧರ್ಮಾತ್ಮರುಗಳು ಧನ್ಯ-ಧನ್ಯರಿದ್ದಾರೆ. ಮುನಿಗಳಾದ ನಾವು ಕೂಡ ಇಂಥ ಮೋಕ್ಷಮಾರ್ಗಿಯಾದ ಸಾಧಕರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ತ್ಯಾಗಿ ಆತ್ಮಧ್ಯಾನಿಯಾದ ಮಹಾತ್ಮನೇ ಧನ್ಯನಿದ್ದಾನೆಂದು ಈಗ ಹೇಳುತ್ತಾರೆ, -

**ಧಣ್ಣಾ ತೇ ಭವಯಂತ ಬುಹ ಜೇ ಪರಭಾವ ಚಯಂತಿ**
**ಲೋಯಾಲೋಯ-ಪಯಾಸಯರು ಅಪ್ಪಾ ವಿಮಲ ಮುಣಂತಿ ||64||**

**ಲೋಕೋತ್ತರ ಬುಧ ಭಗವಂತ ತೆಜಿಸಿರುವನು ಪರಭಾವಗಳ**
**ಲೋಕಾಲೋಕ ಪ್ರಕಾಶಕನು ತಿಳಿಯುವನು ವಿಮಲಾತ್ಮನನು ||64||**

**ಅರ್ಥ :-** ಯಾರು ಪರಭಾವಗಳನ್ನು ತ್ಯಾಗ ಮಾಡುತ್ತಾರೆ ಮತ್ತು ಲೋಕಾಲೋಕ ಪ್ರಕಾಶಕನಾದ ತಮ್ಮ ನಿರ್ಮಲ ಆತ್ಮನ ಅನುಭವ ಮಾಡುತ್ತಾರೆ ಆ ಭಗವಾನ ಜ್ಞಾನಿ ಮಹಾತ್ಮರುಗಳು ಧನ್ಯರಿದ್ದಾರೆ.

ಯಾರು ತಮ್ಮ ನಿರ್ಮಲ ಶುದ್ಧ ಸ್ವಭಾವವನ್ನು ಸಾಧ್ಯವನ್ನಾಗಿ ಮಾಡಿಕೊಂಡು ಸಾಧಿಸಿದ್ದಾರೆ ಅಂಥ ಧರ್ಮಾತ್ಮರು ಧನ್ಯರಿದ್ದಾರೆ. ನೋಡಿರಿ ! ಹಣವುಳ್ಳವರಂತೂ ಧೂಳದ ಅಧಿಪತಿಗಳಿದ್ದು ಅವರನ್ನು ಧನ್ಯರೆಂದು ಹೇಳಲಿಲ್ಲ, ದಾನದಲ್ಲಿ ವಿಪುಲವಾಗಿ ಹಣ ಖರ್ಚು ಮಾಡುವವರನ್ನು ಕೂಡ ಧನ್ಯರೆಂದು ಹೇಳಲಿಲ್ಲ, ಏಕೆಂದರೆ ಅವೇನು ಧನ್ಯವಾದ ಕಾರ್ಯಗಳಲ್ಲ, ಅಂತರ್ಯದಲ್ಲಿ ಸಚ್ಚಿದಾನಂದ ಧ್ರುವ ಧನವು ಬಿದ್ದುಕೊಂಡಿದ್ದು ಅದರಲ್ಲಿ ಯೋಗ ಎಂದರೆ ಒಂದುಮಾಡಿ ಶುದ್ಧ ನಿರ್ಮಲಭಾವವನ್ನು ಪ್ರಕಟ ಮಾಡಿಕೊಳ್ಳುವಂಥ ಧರ್ಮಾತ್ಮನು ಧನ್ಯನಿದ್ದಾನೆ.

ಪರಭಾವಗಳಿಂದ ವಿಮುಖರಾಗಿ ಸ್ವಸನ್ಮುಖದೃಷ್ಟಿ ಮಾಡಿರುವಂಥ ಧರ್ಮಾತ್ಮರುಗಳು ಧನ್ಯರಿದ್ದಾರೆ. ಆತ್ಮನ ಜ್ಞಾನ ಸ್ವಭಾವದಂಥ ಅಸಾಧಾರಣ ಸ್ವಭಾವವು ಬೇರೆ ಯಾವ ಅನ್ಯ ದ್ರವ್ಯಗಳಲ್ಲೂ ಇಲ್ಲ, ಇಷ್ಟೇ ಏಕೆ ಆತ್ಮನ ಇತರ ಯಾವ ಗುಣಗಳಲ್ಲಿ ಕೂಡ ಇಂಥ ಅಸಾಧಾರಣ ಸ್ವಭಾವವಿಲ್ಲ, ಇಂಥ ಜ್ಞಾನ ಸ್ವಭಾವದ ಮೂಲಕವೇ ತಮ್ಮ ಆತ್ಮನನ್ನು ತಿಳಿದವರು ಮತ್ತು ಅದರಲ್ಲಿ ಏಕಾಗ್ರತೆ ಹೊಂದಿದವರು ಅವರು ಧನ್ಯರಿದ್ದಾರೆ, ಪ್ರಶಂಸನೀಯರಿದ್ದಾರೆ.

ಭಗವಾನ ಆತ್ಮನ ಪರಮ ಸಂಪತ್ತನ್ನು ರುಚಿ ಪೂರ್ವಕವಾಗಿ ಸಾಧಿಸುತ್ತಿರುವಂತೆಯೇ ಜಗತ್ತಿನ ಸಮಸ್ತ ಪದಾರ್ಥಗಳಿಂದ ಉದಾಸೀನತೆಯು ಬಂದು ಬಿಡುತ್ತದೆ. ಒಂದು ವೇಳೆ ಪುಣ್ಯೋದಯದಿಂದ ಚಕ್ರವರ್ತಿ, ಕಾಮದೇವ, ನಾರಾಯಣ, ಪ್ರತಿ ನಾರಾಯಣ, ಇಂದ್ರ, ಧರಣೇಂದ್ರ, ಅಹಮಿಂದ್ರ ಮೊದಲಾದ ಪದವಿಗಳು ಪ್ರಾಪ್ತವಾದರೂ ಕೂಡ ಧರ್ಮಾತ್ಮರುಗಳಿಗೆ ಅವುಗಳಲ್ಲಿ ಮೋಹ-ಮಮತೆಗಳು ಉತ್ಪನ್ನವಾಗುವುದಿಲ್ಲ. ನಿಜಪದದ ಪೂರ್ಣ ಸಾಧನೆ ಮಾಡುವಂಥ ಧರ್ಮಾತ್ಮನಿಗೆ ಲೌಕಿಕ ಪದವಿಗಳ ಕುರಿತು ಸ್ವಲ್ಪ ಮಾತ್ರವೂ ಅಪೇಕ್ಷೆಯಿರುವುದಿಲ್ಲ, ಧರ್ಮದ ಅನುರಾಗ, ಪಂಚ-ಪರಮೇಷ್ಠಿಗಳ ಭಕ್ತಿ, ಶಾಸ್ತ್ರಸ್ವಾಧ್ಯಾಯದ ಭಾವ, ಪೂಜೆಯ ಭಾವ, ಅನುಕಂಪೆ ಮೊದಲಾದ ಶುಭ ಭಾವಗಳು

ಧರ್ಮಾತ್ಮನಿಗೆ ಬರುತ್ತವೆ, ಆದರೆ ಅವನಿಗೆ ಅವುಗಳ ಆದರವಿರುವುದಿಲ್ಲ. ಶುದ್ಧ ಸ್ವಭಾವದಲ್ಲಿ ಸ್ಥಿರತೆಯಾಗದಿರುವುದರಿಂದ ಶುಭ ಭಾವಗಳು ಬರುತ್ತವೆ, ಆದರೆ ಧರ್ಮಾತ್ಮನಿಗೆ ಆ ಭಾವಗಳ ಕುರಿತು ಹಾಗೂ ಅವುಗಳ ಫಲದ ಕುರಿತು ಆದರವಿರುವುದಿಲ್ಲ. ಧರ್ಮಾತ್ಮನಿಗೆ ಧರ್ಮ ಪ್ರಭಾವನೆಯ ವಿಕಲ್ಪವು ಬರುತ್ತದೆ, ಆದರೆ ಅದನ್ನು ಬಿಡಲು ಯೋಗ್ಯವೆಂದೇ ಅವನು ತಿಳಿಯುತ್ತಾನೆ. ಒಂದು ನಿಜಪದದ ನಿರ್ವಿಕಲ್ಪ ಸಾಧನೆಯಲ್ಲಿಯೇ ಉಪಯೋಗವನ್ನು ತೊಡಗಿಸುತ್ತಾನೆ. ಏಕೆಂದರೆ ಶುದ್ಧ ಸ್ವಭಾವದಲ್ಲಿ ಎಷ್ಟು ಏಕಾಗ್ರತೆಯಾಗುವುದು ಅಷ್ಟೇ ತನಗೆ ಲಾಭವಿದೆ. ಧರ್ಮ ಪ್ರಭಾವನೆಯಿಂದ ತನ್ನ ಆತ್ಮನಿಗೆ ಯಾವ ಲಾಭವಾಗುವುದಿಲ್ಲ.

ಸಂಸಾರದ ಸಮಸ್ತ ವಿಕಲ್ಪ ಜಾಲಗಳಿಂದ ವಿರಕ್ತರಾಗಿ, ಸಪ್ತ ತತ್ತ್ವಗಳು, ನವ ಪದಾರ್ಥಗಳು ಮೊದಲಾದ ವಿಕಲ್ಪಗಳನ್ನು ಕೂಡ ತ್ಯಾಗ ಮಾಡಿ ಧರ್ಮಾತ್ಮನು ಒಂದು ನಿಜ ಶುದ್ಧಾತ್ಮನನ್ನೇ ಧ್ಯಾನಿಸುತ್ತಾನೆ ಮತ್ತು ಪರಮಾನಂದದ ಅಮೃತಪಾನ ಮಾಡುತ್ತಾನೆ; ಅಂತರ್ಯದಲ್ಲಿನ ಸುಧಾರಸವನ್ನೇ ಕುಡಿಯುತ್ತಾನೆ. ಇಂಥ ಧರ್ಮಾತ್ಮನೇ ಧನ್ಯನಿದ್ದಾನೆ. ಪ್ರಶಂಸನೀಯನಿದ್ದಾನೆ, ಅವನೇ ಮಹಾವಿವೇಕಿಯಿದ್ದಾನೆ, ಅವನೇ ಪಂಡಿತನಿದ್ದಾನೆ, ಪರಮ ಐಶ್ವರ್ಯವಂತನು ಕೂಡ ಅವನೇ ಇದ್ದಾನೆಂದು ಆಚಾರ್ಯದೇವರು ಹೇಳುತ್ತಾರೆ.

ಮನೆಯ ಒಂದು ಕೋಣೆಯಲ್ಲಿ ಕುಳಿತುಕೊಂಡ ಜ್ಞಾನಿಯು ಅತ್ಯಂತ ಶಾಂತಿಯಿಂದ ತನ್ನ ಶಾಂತಿಯ ಅನುಭವ ಮಾಡುತ್ತಾನೆ ಅವನೇ ಧನ್ಯನಿದ್ದಾನೆ, ಐಶ್ವರ್ಯವಂತನಿದ್ದಾನೆ. ಆದರೆ ಧನವುಳ್ಳವನು ಅವನು ನಿಜವಾಗಿ ಐಶ್ವರ್ಯವಂತನಿಲ್ಲ, ಆದರೆ ಆತ್ಮನ ಸಂಪತ್ತನ್ನು ಭೋಗಿಸುವಂಥ ಧರ್ಮಾತ್ಮನು ಮಾತ್ರ ಐಶ್ವರ್ಯವಂತನಿದ್ದಾನೆ.ಧರ್ಮಾತ್ಮ ಜೀವನು ನಿಜ ಶುದ್ಧಾತ್ಮನ ಪ್ರತೀತಿ, ಜ್ಞಾನ, ಸ್ಥಿರತೆಯರೂಪ ರತ್ನತ್ರಯದ ಅಧಿಪತಿಯಿದ್ದಾನೆ ಮತ್ತು ಅವನೇ ಧನಾಢ್ಯನಿದ್ದಾನೆ, ಧನವುಳ್ಳವನು ನಿಜವಾಗಿ ಧನಾಢ್ಯನಿಲ್ಲ.

**ಪ್ರಶ್ನೆ :-** ಹಾಗಾದರೆ ಧನವುಳ್ಳವನು ಏನು ಮಾಡಬೇಕಾಗುವುದು ?

**ಉತ್ತರ :-** ಧನವುಳ್ಳವನಂತೂ ಆ ಧನದ ಮೋಹವನ್ನು ಬಿಟ್ಟುಕೊಟ್ಟು ಆತ್ಮನ ಅಭಿರುಚಿ ಮಾಡಿ ರತ್ನತ್ರಯದ ಪ್ರಾಪ್ತಿ ಮಾಡಿಕೊಳ್ಳಬೇಕಾಗುವುದು.

ಸಮ್ಯಗ್ದರ್ಶನ, ಜ್ಞಾನ, ಚಾರಿತ್ರರೂಪದ ಮೂರು ರತ್ನಗಳನ್ನು ಧಾರಣ ಮಾಡುವಂಥವನೇ ನಿಜವಾದ ಭಾಗ್ಯವಂತನಿದ್ದಾನೆ. ಅವನು ಅತೀಂದ್ರಿಯ ಜ್ಞಾನ ಮತ್ತು ಆನಂದದ ಅಧಿಪತಿಯಾಗಿ ಅಲ್ಪಕಾಲದಲ್ಲಿಯೇ ಮೋಕ್ಷ ಲಕ್ಷ್ಮಿಯ ಅಧಿಪತಿಯಾಗುವನು. ಶಾಶ್ವತ ಸುಖದ ಅಧಿಪತಿಯಾಗುವನು.

ಆತ್ಮಾನುಶಾಸನದಲ್ಲಿ ಒಂದು ಅತ್ಯಂತ ಸುಂದರವಾದ ದೃಷ್ಟಾಂತವು ಬರುತ್ತದೆ. ಅತೀಂದ್ರಿಯ ಆನಂದದ ನಿಜಾನುಭವದಲ್ಲಿ-ಸ್ವಸಂವೇದನದಲ್ಲಿ ನಿಮಗ್ನರಾದ ದಿಗಂಬರಸಂತರುಗಳ ಶರೀರಕ್ಕೆ ತಗಲಿದ ರಜಕಣವೇ ಮಾಲಿನ್ಯವೇ ಅವರ ಆಭೂಷಣವಿದೆ, ಪಾಷಾಣದ ಶಿಲೆಯೇ ಅವರು ಕುಳಿತುಕೊಳ್ಳುವ ಸಿಂಹಾಸನವಿದೆ. ಹರಳುಗಳಿಂದ ತುಂಬಿದ ಭೂಮಿಯೇ ಅವರ ಶಯ್ಯೆಯಿದೆ, ಕ್ರೂರವಾದ ಸಿಂಹ - ವ್ಯಾಘ್ರಗಳು ವಾಸಿಸುವ ಗುಹೆಯೇ ಅವರ ಸುಂದರವಾದ ಮನೆಯಿದೆ, ಅನುಭೂತಿಯು ಅವರ ಗಿರಿಗುಹೆಯಿದೆ ಮತ್ತು ಅವರು ಅಜ್ಞಾನದ ಸಮಸ್ತ ಗ್ರಂಥಿಗಳನ್ನು ಕತ್ತರಿಸಿಹಾಕಿದ್ದಾರೆ, ಅಲ್ಲದೆ ಜ್ಞಾನ ಹಾಗೂ ಆನಂದದ ಭಂಡಾರವನ್ನೇ ತೆರೆದು ಬಿಟ್ಟಿದ್ದಾರೆ, ಹೀಗೆ ಜಗತ್ತಿನಿಂದ ಅತ್ಯಂತ ಉದಾಸ ಮತ್ತು ಮೋಕ್ಷ ಲಕ್ಷ್ಮಿಯ ಅಭಿರುಚಿಯುಳ್ಳ ಹಾಗೂ ಸಮ್ಯಕ್ ಜ್ಞಾನದ ಅಧಿಪತಿಯಾದ ಯೋಗಿ ವೃಂದವು ನಮ್ಮ ಮನಸ್ಸನ್ನು ಪವಿತ್ರ ಮಾಡಲಿ.

ಗೃಹಸ್ಥನಿರಲಿ ಅಥವಾ ಮುನಿಯಿರಲಿ ಅವರೀರ್ವರ ಸಲುವಾಗಿ ಆತ್ಮನ ಸ್ಥಿರತೆಯೇ ಸಿದ್ಧ-ಸುಖದ ಉಪಾಯವಿದೆಯೆಂದು ಈಗ ಹೇಳುತ್ತಾರೆ, -

**ಸಾಗಾರು ವಿ ಣಾಗಾರು ಕು ವಿ ಜೋ ಅಪ್ಪಾಣಿ ವಸೇಇ**
**ಸೋ ಲಹು ಪಾವಇ ಸಿದ್ಧಿ-ಸುಹು ಜಿಣವರು ಏಮ ಭಣೇಇ ॥65॥**

**ಮುನಿಯಿರಲಥವಾ ಗೃಹಿಯಿರಲಿ ವಾಸಿಸುವವನು ನಿಜ ಆತ್ಮನಲಿ**
**ಮಾಣದೆ ಪಡೆವನು ಸಿದ್ಧಿ-ಸುಖ ಶ್ರೀಜಿನದೇವರ ಕಥನವಿದೆ ॥65॥**

**ಅರ್ಥ :-** ಗೃಹಸ್ಥನಿರಲಿ ಅಥವಾ ಮುನಿಯಿರಲಿ ಯಾರೇ ಇದ್ದರೂ ಯಾರು ತಮ್ಮ ಆತ್ಮನ ಅಂತರ್ಯದಲ್ಲಿ ವಾಸ ಮಾಡುತ್ತಾರೆ ಅವರು ಶೀಘ್ರವಾಗಿ ಸಿದ್ಧಿಯ ಸುಖವನ್ನು ಪಡೆಯುತ್ತಾರೆಂದು ಶ್ರೀಜಿನದೇವರು ಹೇಳಿದ್ದಾರೆ.

ಗೃಹಸ್ಥಾಶ್ರಮದೊಳಗೆ ಆತ್ಮನ ಅನುಭವವು ಆಗುವ ಸಾಧ್ಯತೆಯಿಲ್ಲವೆಂದು ಈಗ ಲೋಕದಲ್ಲಿ ಅದೆಷ್ಟೋ ಜನರು ಹೇಳುತ್ತಾರೆ. ಆತ್ಮನ ಅನುಭವವಂತೂ ಎಂಟನೇ ಗುಣಸ್ಥಾನದಲ್ಲಿಯೇ ಆಗುವುದೆಂದು ಹೇಳುವವರ ಸಲುವಾಗಿ ಈ ಗಾಥೆಯಿದೆ. ಜಿನೇಂದ್ರ ಪರಮಾತ್ಮರಾದ ಭಗವಾನ ತೀರ್ಥಂಕರ ದೇವರು ಸಮವಸರಣದೊಳಗೆ ನೂರು ಇಂದ್ರರುಗಳ ಉಪಸ್ಥಿತಿಯಲ್ಲಿ ಅಪ್ಪಣೆ ಕೊಡುವುದೇನೆಂದರೆ -ಜೀವನು ಸಮ್ಯಗ್ದರ್ಶನ-ಜ್ಞಾನ ಸಹಿತನಾಗಿ ಗೃಹಸ್ಥಾಶ್ರಮದಲ್ಲಿ ಇರುತ್ತಿದ್ದರು ಕೂಡ ಅವನು ಆತ್ಮನ ಅನುಭವ ಮಾಡುತ್ತಾನೆ. ವೀತರಾಗ ಜಿನೇಂದ್ರದೇವರ ವಾಣಿಯು ಇಚ್ಛಾರಹಿತವಾಗಿ ಹೊರಡುತ್ತದೆ ಅದರಲ್ಲಿ ಈ ಮಾತು ಬಂದಿದೆ. ಹೀಗೆ ಜಿನೇಂದ್ರ ದೇವರ ರುಜುವಾತು(ಸಾಕ್ಷ್ಯ) ಕೊಟ್ಟು ಗೃಹಸ್ಥನಿರಲಿ ಅಥವಾ ಮುನಿಯಿರಲಿ ಈರ್ವರ ಸಲುವಾಗಿ ಆತ್ಮನ ಅನುಭವವೇ ಸಿದ್ಧಿಸುಖದ ಉಪಾಯವಿದೆಯೆಂದು ಆಚಾರ್ಯ ಶ್ರೀ ಯೋಗೀಂದ್ರದೇವರು ಹೇಳುತ್ತಾರೆ. ನಾಲ್ಕನೆಯ ಮತ್ತು ಐದನೆಯ ಗುಣಸ್ಥಾನಾವರ್ತಿಯಾದ ಗೃಹಸ್ಥನು ಕೂಡ ಆತ್ಮನಲ್ಲಿ ವಾಸಿಸುತ್ತಾನೆ ಮತ್ತು ವಾಸಿಸುವ ಸಾಧ್ಯತೆಯಿದೆ. ಗೃಹಸ್ಥಾಶ್ರಮದಲ್ಲಿ ರಾಗವಿದ್ದರು ಕೂಡ ಧರ್ಮಾತ್ಮ ಜೀವನು ಅದರಿಂದ ನಿವೃತ್ತನಾಗಿ ಸ್ವರೂಪದಲ್ಲಿ ವಾಸಿಸುತ್ತಾನೆ - ರಮಿಸುತ್ತಾನೆ. ಮುನಿರಾಜರುಗಳು ಉಗ್ರರೂಪದಿಂದ ಆತ್ಮನಲ್ಲಿ ವಾಸಿಸುತ್ತಾರೆ.

ಸಮ್ಯಕ್‌ದೃಷ್ಟಿಗೆ ಮೂರು ಕಷಾಯ ಚೌಕಡಿಗಳಿದ್ದರೆ ಶ್ರಾವಕನಿಗೆ ಎರಡು ಕಷಾಯ ಚೌಕಡಿಗಳಿರುತ್ತವೆ. ಮತ್ತು ಮುನಿರಾಜರುಗಳಿಗೆ ಮಾತ್ರ ಒಂದೇ ಕಷಾಯ ಚೌಕಡಿಯಿರುತ್ತದೆ. ಆದರೆ ನಿಶ್ಚಯದಿಂದ ಈ ಮೂವರು ಆತ್ಮನಲ್ಲಿಯೇ ವಾಸಮಾಡಿರುತ್ತಾರೆ. ಅವರು ಕಷಾಯದಲ್ಲಿ ರಾಗದಲ್ಲಿ ವಾಸ ಮಾಡುವುದಿಲ್ಲ, ಏಕೆಂದರೆ ಅವರ ದೃಷ್ಟಿಯು ಓರ್ವ ಆತ್ಮನ ಮೇಲೆಯೇ ಇರುತ್ತದೆ. ರಾಗಾದಿಗಳಿದ್ದರೂ ಅವನ್ನು ಅವರು ಕೇವಲ ತಿಳಿದುಕೊಳ್ಳುತ್ತಾರೆ. ನಿಶ್ಚಯದಿಂದ ಧರ್ಮಾತ್ಮರು ತಮ್ಮ ತಮ್ಮ ಆತ್ಮನಲ್ಲಿಯೇ ನೆಲೆಸುತ್ತಾರೆ.

ಸಮ್ಯಕ್‌ದೃಷ್ಟಿಯು ಗೃಹಸ್ಥಾವಸ್ಥೆಯಲ್ಲಿದ್ದರೂ ಕೂಡ ಅವರು ವಿಕಲ್ಪಗಳನ್ನು ಮುರಿದು ಹಾಕಿ ಒಮ್ಮೊಮ್ಮೆ ನಿರ್ವಿಕಲ್ಪ ಸ್ವಭಾವದಲ್ಲಿ ವಾಸಿಸುತ್ತಾರೆ. ಸಮ್ಯಕ್‌ದೃಷ್ಟಿಯ ಅಪೇಕ್ಷೆಯಿಂದ ಮುನಿರಾಜರ ಪುರುಷಾರ್ಥವು ವಿಶೇಷವಾಗಿ ಉಗ್ರವಿರುವುದರಿಂದ ಅವರು ಪುನಃ ಪುನಃ ಆತ್ಮನಲ್ಲಿ ವಾಸ ಮಾಡುತ್ತಾರೆ. 'ಆತ್ಮ ಎಂದರೆ ಶುದ್ಧ ಭಾವದ ಭಂಡಾರ'ವಿದ್ದು ಅವರು ರಾಗವನ್ನು ಮುರಿದು ಹಾಕಿ-ಇಂಥ ನಿಜಾತ್ಮನ ಭಂಡಾರವನ್ನು ತೆರೆಯುತ್ತಾರೆ ಮತ್ತು ಅದರಲ್ಲಿಯೇ ವಾಸ ಮಾಡುತ್ತಾರೆ. ಧರ್ಮಾತ್ಮನಿಗೆ ಪುಣ್ಯ-ಪಾಪ ಭಾವದ ಅಭಿರುಚಿ-ಪ್ರೀತಿಯಿಲ್ಲದಿರುವುದರಿಂದ ಅವರು ರಾಗವಿದ್ದರು ಕೂಡ ಆ ರಾಗದಲ್ಲಿ ವಾಸಿಸುವುದಿಲ್ಲ ಎಂದರೆ ಅವರು ಆ ರಾಗದಲ್ಲಿ ವಾಸಿಸುತ್ತಾರೆಂದು ಹೇಳಲಾಗುವುದಿಲ್ಲ. ಧರ್ಮಾತ್ಮನಿಗೆ ಓರ್ವ ಆತ್ಮನ ಪ್ರೀತಿಯಿರುವುದರಿಂದ ಅವನ ವಾಸಸ್ಥಾನವು ಓರ್ವ ಆತ್ಮನೇ ಇದ್ದಾನೆ. ಅವನು ಆತ್ಮನಲ್ಲಿಯೇ ಇರುತ್ತಾನೆ.

ಈ ಗಾಥೆಯಲ್ಲಿ ಮೂರು ಮಾತುಗಳನ್ನು ಸಿದ್ಧ ಮಾಡಿದ್ದಾರೆ. ಮೊದಲನೆಯದು ಯಾರು ಅಂತರ್ಮುಖ ದೃಷ್ಟಿ ಮಾಡಿ ಶ್ರದ್ಧೆ ಜ್ಞಾನ ಹಾಗೂ ಲೀನತೆಯನ್ನು ಪ್ರಕಟ ಮಾಡಿದ್ದಾರೆ ಅವರು ಆತ್ಮನಲ್ಲಿಯೇ ವಾಸಿಸುತ್ತಾರೆ.

ಎರಡನೆಯದು ಗ್ರಹಸ್ಥಾಶ್ರಮದಲ್ಲಿ ಆತ್ಮನೊಳಗೆ ವಾಸಿಸುವ ಸಾಧ್ಯತೆಯಿಲ್ಲವೆಂದು ಹೇಳುವವರ ನಿಷೇಧ ಮಾಡಲಾಗಿದೆ. ಮತ್ತು ಮೂರನೆಯದು ಧರ್ಮಾತ್ಮನಿಗೆ ರಾಗರೂಪದ ವ್ಯವಹಾರವಿರುತ್ತದೆ, ಆದರೆ ಅದರ ಸ್ವಾಮಿತ್ವವಿರುವುದಿಲ್ಲ, ಧರ್ಮಾತ್ಮನು ರಾಗದಿಂದ ಮುಕ್ತನೇ ಇರುತ್ತಾನೆ. ಸಮ್ಯಕ್‌ದೃಷ್ಟಿ ಹೀಗೆ ಹೇಳುತ್ತಾನೆ -

ನನ್ನ ಪ್ರೀತಿಯುಂಟಾಗಿದೆ ಚೈತನ್ಯದ ಜತೆಯಲ್ಲಿ
ಅನ್ಯ ಭಾವವನು ನಾನು ಈಗ ಆದರಿಸುವುದಿಲ್ಲ
ಧರ್ಮ ಜನೇಶ್ವರನ ಹಾಡುವೆನು ಆನಂದದಿಂದ
ಪ್ರೀತ ಜಿನೇಶ್ವರನಲ್ಲಿ ಭಂಗ ಬಾರದ ರೀತಿಯಿಂದ
ಮನ-ಮಂದಿರದಲ್ಲಿ ಅನ್ಯವಾವುದು ಬಾರದಂದು

ಅಖಂಡ ಆನಂದ ಸ್ವರೂಪನಾದ ಪ್ರಭು ನನ್ನ ಆತ್ಮನಿದ್ದು ನಾನು ಅವನದೇ ಗುಣಗಾನ ಮಾಡುತ್ತೇನೆ. ನಾನು ಪುಣ್ಯ- ಪಾಪದ ಗುಣಗಾನ ಮಾಡುವುದಿಲ್ಲ. ನಮ್ಮ ಮನ - ಮಂದಿರದಲ್ಲಿ ವಿಕಲ್ಪಗಳಿಗೆ ಸ್ಥಾನ ಕೊಡದಿರುವುದು ಇದು ನಮ್ಮ ಕುಲ ಪರಂಪರೆಯ ರೀತಿಯಿದೆ.

ಎಲ್ಲಿ ಯಾರದು ಅಭಿರುಚಿಯಿರುತ್ತದೆ ಅಲ್ಲಿ ಅವರ ವಾಸವಿರುತ್ತದೆ; ಎಲ್ಲಿ ಯಾರದು ಅಭಿರುಚಿ ಇರುವುದಿಲ್ಲ ಅಲ್ಲಿ ಅವರದು ವಾಸವಿರುವುದಿಲ್ಲ. ಯಾರು ಆತ್ಮನಲ್ಲಿ ಅಭಿರುಚಿ ಮಾಡಿ ಆತ್ಮನಲ್ಲಿಯೇ ವಾಸ ಮಾಡಿದ್ದಾರೆ ಅವರುಬೇಕಾದರೆ ಗೃಹಸ್ಥರಾಗಿರಲಿ ಅಥವಾ ಮುನಿಯಾಗಿರಲಿ ಅವರೀರ್ವರು ಅಲ್ಪಕಾಲದಲ್ಲಿಯೇ ಸಿದ್ಧ-ಸುಖವನ್ನು ಪಡೆಯುವರು. ಎಲ್ಲಿ ಯಾರದು ಪ್ರೀತಿಯಿರುತ್ತದೆ ಅಲ್ಲಿಯೇ ಅವರು ಲೀನರಿರುತ್ತಾರೆ, ಇತರ ಕಡೆಗೆ ಲೀನರಾಗುವುದು ಅವರಿಗೆ ಒಳ್ಳೆಯದೆನಿಸುವುದಿಲ್ಲ, ಯಾರಿಗೆ ನಿಜಾತ್ಮನ ಪ್ರಭುತೆಯ ದಿವ್ಯ - ಸಂದೇಶವು ಕೇಳುವುದಕ್ಕೆ ದೊರಕಿದೆ, ಅವರಿಗೆ ತಮ್ಮ ಆತ್ಮನ ಹೊರತಾಗಿ ಬೇರೆ ಎಲ್ಲಿಯೂ ಇರುವುದಕ್ಕೆ ಮನಸ್ಸು ಬರುವುದಿಲ್ಲ. ವನ ವಿಹಾರಿಯಾದ ದಿಗಂಬರ ಸಂತರು ಮಹಾಲಕ್ಷ್ಮಿಯ ಅಧಿಪತಿಯಾದ ಆಚಾರ್ಯ ಯೋಗೀಂದುದೇವರು ಭಗವಂತರ ವಾಣಿಯ ಆಧಾರ ತೆಗೆದುಕೊಂಡು ಹೀಗೆ ಆಜ್ಞಾಪಿಸುತ್ತಿದ್ದಾರೆ.

ಧರ್ಮಾತ್ಮನಿಗೆ ಆತ್ಮ-ರಸದ ಎದುರಿಗೆ ಬೇರೆ ಯಾವ ರಸವೂ ಮನಸ್ಸಿಗೆ ಹಿಡಿಸುವುದಿಲ್ಲ-ಎಲ್ಲಿ ಲಕ್ಷ್ಯ ಹೋಗುವುದೇ ಇಲ್ಲ. ಜ್ಞಾನೀ ಗೃಹಸ್ಥನಿರಲಿ ಅಥವಾ ಮುನಿಯಿರಲಿ ಅವರೀರ್ವರು ಆತ್ಮನಲ್ಲಿಯೇ ವಾಸ ಮಾಡುತ್ತಾರೆ. ನೀನು ಈ ಮಾತಿನ ನಿಷೇಧ ಮಾಡಬೇಡ ! ಒಂದು ವೇಳೆ ಈ ವಸ್ತು ಸ್ವಭಾವದ ನಿಷೇಧ ಮಾಡಿದೆಯೆಂದರೆ ನೀನು ಜಿನದೇವರ ವಿರೋಧಿಯಾಗುವೆ. ಮತ್ತು ಯಾರು ಜಿನದೇವರ ವಿರೋಧಿಯಾಗುವರು ಅವರು ಆತ್ಮನ ವಿರೋಧಿ ಯಿದ್ದಾರೆ. ಮಿಥ್ಯಾದೃಷ್ಟಿಯು ಸಮ್ಯಕ್‌ದೃಷ್ಟಿಯಾದನು ಎಂದರೆ ಬಹಿರಾತ್ಮನು ಅಂತರಾತ್ಮನಾದನು ಯಾವಾಗ ಅಂತರಾತ್ಮನಾಗುವನು ಆಗ ಅವನ ದೃಷ್ಟಿಯಲ್ಲಿ ಅವನ ಜೀವನದಲ್ಲಿ ಸ್ವಲ್ಪವದರೂ ಅಂತರವಾಗುವುದೋ ಅಥವಾ ಇಲ್ಲವೋ ? ಬಹಿರಾತ್ಮನ ನಿವಾಸವಂತೂ ರಾಗದಲ್ಲಿ ಇರುತ್ತದೆ, ಅಂತರಾತ್ಮನು ರಾಗದಲ್ಲಂತೂ ವಾಸಿಸುವ ಸಾಧ್ಯತೆಯಿಲ್ಲ, ಅವನ ನಿವಾಸವಂತೂ ಆತ್ಮನಲ್ಲಿಯೇ ಇರುತ್ತದೆಯೆಂದು ಸ್ವಲ್ಪ -ವಿಚಾರವನ್ನಾದರೂ ಮಾಡು! ಸೋದರನೇ! ಸರಿಯಿರುವುದನ್ನು ವಿರೋಧಿಸಬೇಡ. ಯಾರು ಆತ್ಮನ ಶ್ರದ್ಧೆ-ಜ್ಞಾನ-ಸ್ಥಿರತೆಯನ್ನು ಪ್ರಾಪ್ತ ಮಾಡಿಕೊಂಡಿದ್ದಾರೆ ಅವರು ಗೃಹಸ್ಥರಿರಲಿ ಅಥವಾ ಮುನಿಯಿರಲಿ ಅಲ್ಪಕಾಲದಲ್ಲಿ ಅವಶ್ಯವಾಗಿ ಸಿದ್ಧ ಸುಖ ಪಡೆಯುತ್ತಾರೆ.

ಆಹಹ ! ಕಾನನದಲ್ಲಿ ವಾಸ ಮಾಡುವಂಥ ವೀತರಾಗೀ ಸಾಧುಗಳನ್ನು ಒಂದು ಸಲ ಕಣ್ಣು ಬಿಟ್ಟು ನೋಡು! ಕಾನನದಲ್ಲಿ ಯಾವ ಪ್ರಕಾರ ಸಿಂಹವು ಗರ್ಜನೆ ಮಾಡುತ್ತದೆ ಅದೇ ಪ್ರಕಾರ ಮುನಿರಾಜರುಗಳು ವಸ್ತು ಸ್ವರೂಪದ ಗರ್ಜನೆ ಮಾಡುತ್ತಾರೆ. ಯಾವ ಪ್ರಕಾರ ಸಿದ್ಧ ಭಗವಂತರು ಶುದ್ಧಾತ್ಮನ ಅನುಭವ ಮಾಡುತ್ತಿದ್ದಾರೆ, ಅದೇ ಪ್ರಕಾರ

ಸಮ್ಯಕ್‌ದೃಷ್ಟಿಯು ಕೂಡ ಆತ್ಮಾನುಭವ ಮಾಡುತ್ತಾನೆ. ಸಿದ್ಧ ಮತ್ತು ಸಾಧಕ ಇವರೀರ್ವರು ಒಂದೇ ಜಾತಿಯ ಅತೀಂದ್ರಿಯ ಆನಂದದ ಅನುಭವ ಮಾಡುತ್ತಾರೆ, ಅದರಲ್ಲಿ ಸ್ವಲ್ಪವು ಕೂಡ ಅಂತರವಿರುವುದಿಲ್ಲ. ಯಾವ ಸಾಧನದ ಮೂಲಕ ಅತೀಂದ್ರಯ ಆನಂದದ ಪ್ರಾಪ್ತಿಯಾಗುತ್ತದೆ ಅದೇ ಸಾಧನವು ಸಿದ್ಧ-ಸುಖದ ಉಪಾಯವಿದೆ ಎಂದರೆ ದರ್ಶನ, ಜ್ಞಾನ ಅಥವಾ ಅತೀಂದ್ರಿಯ ಆನಂದವು ಸ್ವಯಂ ಪೂರ್ಣಾನಂದದ ಸಾಧನವಿದೆ.

ಆದುದರಿಂದ ಅತೀಂದ್ರಿಯ ಆನಂದವೇ ಪೂರ್ಣಾನಂದವಾದ ಸಿದ್ಧ -ಸುಖದ ಸಾಧನವಿದೆ, ಇದನ್ನು ಹೊರತುಪಡಿಸಿ ಬೇರೆ ಯಾವ ವ್ಯವಹಾರ ಮೊದಲಾದವು ಸಾಧನವಿಲ್ಲ. ಸ್ವಾನುಭವವೇ ನಿಶ್ಚಯ ಮೋಕ್ಷ ಮಾರ್ಗ ಸ್ವರೂಪ ರತ್ನತ್ರಯವಿದೆ, ಏಕೆಂದರೆ ಸ್ವಾನುಭವದಲ್ಲಿ ಸಮ್ಯಗ್ದರ್ಶನ-ಜ್ಞಾನ-ಚಾರಿತ್ರ ಇವು ಮೂರೂ ಬಂದು ಬಿಡುತ್ತವೆ. ಅದಕ್ಕಾಗಿಯೇ ಸ್ವಾನುಭವ ಅತೀಂದ್ರಿಯ ಆನಂದವೇ ಮೋಕ್ಷಮಂದಿರದ ನೇರವಾದ ಮಾರ್ಗವಿದೆಯೆಂದು ಹೇಳಿದ್ದಾರೆ. ಇಲ್ಲಿ ಮುನಿರಾಜರಂತೂ ವಿಕಲ್ಪ ಮತ್ತು ಹಿಂಸೆ ಮೊದಲಾದ ಐದು ಪಾಪಗಳ ತ್ಯಾಗ ರೂಪದ ಶುಭ ಪ್ರವೃತ್ತಿಯಿದ್ದರು ಕೂಡ ಅದೇನು ಮೋಕ್ಷಮಾರ್ಗವಲ್ಲ. ನಿಶ್ಚಯ ಚಾರಿತ್ರವೆಂದರೆ ಒಂದು ಸ್ವಾನುಭವವೇ ಇದೆ. ಅತೀಂದ್ರಿಯ ಆನಂದವೇ ಇದೆ.

ತತ್ತ್ವಜ್ಞಾನಿಗಳು ವಿರಳವಾಗಿಯೇ ದೊರಕುತ್ತಾರೆಂದು ಈಗ ಹೇಳುತ್ತಾರೆ, -

**ವಿರಲಾ ಜಾಣಹಿಂ ತತ್ತು ಬುಹ ವಿರಲಾ ಣಿಸುಣಹಿಂ ತತ್ತು**
**ವಿರಲಾ ಝಾಯಹಿಂ ತತ್ತು ಜೆಯ ವಿರಲಾ ಧಾರಹಿಂ ತತ್ತು ॥66॥**

**ವಿರಳರು ತಿಳಿವರು ತತ್ತ್ವವನು ವಿರಳರು ಕೇಳ್ವರು ತತ್ತ್ವವನು**
**ವಿರಳರು ಮಾಳ್ಪರು ನಿಜಧ್ಯಾನ ವಿರಳರು ಧರಿಪರು ಎಲೆ ಜೀವ ॥66॥**

**ಅರ್ಥ :-** ತತ್ತ್ವವನ್ನು ತಿಳಿದುಕೊಳ್ಳುವಂಥ ವಿದ್ವಾಂಸರು ವಿರಳವಾಗಿಯೇ ಇದ್ದಾರೆ, ತತ್ತ್ವವನ್ನು ಕೇಳುವಂಥ ಶ್ರೋತೃವಂತೂ ವಿರಳರಾಗಿಯೇ ಇದ್ದಾರೆ. ತತ್ತ್ವವನ್ನು ಧ್ಯಾನಿಸುವಂಥ ಜೀವರುಗಳು ವಿರಳರಾಗಿಯೇ ಇದ್ದಾರೆ. ಮತ್ತು ತತ್ತ್ವವನ್ನು ಧಾರಣ ಮಾಡಿ ಸ್ವಾನುಭವಿಯಾಗುವವರು ಕೂಡ ವಿರಳರಾಗಿಯೇ ಇದ್ದಾರೆ.

ಇಂದು ಭಗವಾನ ಮಹಾವೀರ ಸ್ವಾಮಿಯ ದಿವ್ಯ ಧ್ವನಿಯು ಹೊರಟ ದಿವಸವಿದೆ. ಹಾಗೆ ಪ್ರಭುವಿಗೆ ಕೇವಲ ಜ್ಞಾನವಂತೂ ವೈಶಾಖ ಶುದ್ಧ ದಶಮಿಯ ತಿಥಿಯಂದು ಆಗಿತ್ತು, ಆದರೆ ಅರವತ್ತಾರು ದಿವಸಗಳವರೆಗೆ ದಿವ್ಯ ಧ್ವನಿಯೇ ಹೊರಡಲಿಲ್ಲ. ಆಗ ಭಗವಂತರ ದಿವ್ಯಧ್ವನಿಯನ್ನು ಗ್ರಹಣ ಮಾಡುವಂಥ ಗಣಧರರ ಉಪಸ್ಥಿತಿ ಇಲ್ಲದಿರುವುದರ ಕಾರಣದಿಂದ ದಿವ್ಯಧ್ವನಿಯು ಹೊರಡಲಿಲ್ಲವೆಂದು ವ್ಯವಹಾರದಿಂದ ಹೇಳಲಾಗುತ್ತದೆ. ಆದರೆ ಆಗ ವಾಸ್ತವಿಕವಾಗಿ ವಾಣಿಯು ಹೊರಡುವ ಯೋಗವೇ ಇಲ್ಲದಿರುವುದರಿಂದ ವಾಣಿಯು ಹೊರಡಲಿಲ್ಲ. ಅನಂತರ ಇಂದ್ರನು ವಿಚಾರ ಮಾಡಿ ಇಂದ್ರಭೂತಿಯ - ಗೌತಮರ ಹತ್ತಿರಕ್ಕೆ ಬರುತ್ತಾನೆ ಮತ್ತು ಆರು ದ್ರವ್ಯ, ಏಳು ತತ್ತ್ವ ಹಾಗೂ ಒಂಭತ್ತು ಪದಾರ್ಥಗಳ ಸ್ವರೂಪವನ್ನು ತಿಳಿಸಿಕೊಡುವ ಸಲುವಾಗಿ ಅವರನ್ನು ಕೇಳುತ್ತಾನೆ. ಇವಂತೂ ಗೌತಮರಿಗೆ ಬರುತ್ತಲೇ ಇರಲಿಲ್ಲ, ಆದುದರಿಂದ ಅವರು ನಡೆ ನಿನ್ನ ಗುರುಗಳ ಹತ್ತಿರ ಹೋಗೋಣ ! ಎಂದು ಹೇಳುತ್ತಾರೆ. ಆಗ ಇಂದ್ರನು ಗೌತಮರನ್ನು ಕರೆದುಕೊಂಡು ಭಗವಂತರ ಹತ್ತಿರ ಬರುತ್ತಾನೆ. ಅಲ್ಲಿ ಗೌತವರು ಸಮವಸರಣವನ್ನು ನೋಡುತ್ತಿದ್ದಂತೆಯೇ ಅವರ ಮಾನ ಕಷಾಯವು ಕರಗಿ ಸೋರಿ ಹೋಯಿತು. ಆಗ ಅವರು ಅಂತರ್ಯದಲ್ಲಿ ಹೊರಟು ಹೋಗುತ್ತಾರೆ, ಮತ್ತು ಆತ್ಮ ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ. ಅವರದು ಅಂಥ ಯೋಗ್ಯತೆಯೇ ಇತ್ತಲ್ಲವೆ ! ಕೂಡಲೆ ಭಗವಂತರ ದಿವ್ಯಧ್ವನಿಯು ಹೊರಡುತ್ತದೆ. ಅಂದು ಶ್ರಾವಣವದ್ಯ ಪ್ರತಿಪದೆಯ ದಿವಸವಿದ್ದು ಭಗವಂತರ ಮೊಟ್ಟ ಮೊದಲನೆಯ ದಿವ್ಯಧ್ವನಿಯು ಹೊರಟಿತು ಅದನ್ನು ಗೌತಮ ಗಣಧರರು ಗ್ರಹಣ ಮಾಡಿ ಭಾವಶ್ರುತರೂಪದಿಂದ

ಪರಿಣಮನ ಮಾಡಿ ವಾಣಿಯನ್ನು ಸೂತ್ರಗಳ ರೂಪದಿಂದ ಹೆಣೆದರು. ಅಂತರ್ಮುಹೂರ್ತದಲ್ಲಿ ದ್ವಾದಶಾಂಗದ ರಚನೆ ಮಾಡಿದರು. ಈ ಹೊತ್ತಿನ ದಿವಸ ಅದರ ರಚನೆಯಾಗಿತ್ತು. ಆ ಹನ್ನೆರಡು ಅಂಗ ಮತ್ತು ಹದಿನಾಲ್ಕು ಪೂರ್ವಗಳ ಸಾರವೇನಿದೆಯೆಂಬುದನ್ನು ಇಲ್ಲಿ ಹೇಳಲಾಗಿದೆ.

ಸಂಯೋಗ, ವಿಕಲ್ಪ ಹಾಗೂ ಒಂದು ಸಮಯದ ಅವಸ್ಥೆಯ ಉಪೇಕ್ಷೆ ಮಾಡಿ ತ್ರಿಕಾಲ ಜ್ಞಾಯಕ ಸ್ವಭಾವವನ್ನು ಆದರಿಸಬೇಕೆಂಬ ಸಾರವನ್ನು ಯೋಗಸಾರದ ರೂಪದಲ್ಲಿ ಸರ್ವಜ್ಞ ಭಗವಂತರ ವಾಣಿಯಲ್ಲಿ ಬಂದಿದೆ. ಧ್ರುವ ಶಾಶ್ವತ, ಏಕರೂಪ, ಅನಾದಿ ಅನಂತವಾದಂಥ ಆತ್ಮ ವಸ್ತುವಿನಲ್ಲಿ ಏಕಾಕಾರ ಹೊಂದಿ ಸ್ವರೂಪಾನಂದದ ಅನುಭವ ಮಾಡುವುದನ್ನು ಯೋಗಸಾರವೆಂದು ಹೇಳುತ್ತಾರೆ ಮತ್ತು ಅದು ಮೋಕ್ಷದ ಮಾರ್ಗವಿದೆ.

ಆತ್ಮ ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುವುದು ಅತ್ಯಂತ ಕಠಿಣವಿರುವುದರಿಂದ ತೀರ ಕಡಿಮೆ ಸಂಖ್ಯೆಯಲ್ಲಿ ಈ ಆತ್ಮಜ್ಞಾನದ ಲಾಭ ಮಾಡಿಕೊಳ್ಳುವ ಜೀವರುಗಳಿದ್ದಾರೆ. ಆತ್ಮತತ್ತ್ವದ ಮಾತನ್ನು ಹೇಳುವವರಂತೂ ದುರ್ಲಭರಿದ್ದಾರೆ, ಮತ್ತು ಅದನ್ನು ಕೇಳುವಂಥವರು ಕೂಡ ವಿರಳವಾಗಿಯೇ ಇದ್ದಾರೆ. ಯಾರಿಗೆ ನಿಮಿತ್ತದ-ವ್ಯವಹಾರದ ಮತ್ತು ರಾಗಾದಿಗಳ ಮಾತುಗಳು ರುಚಿಸುತ್ತವೆ ಅವರಿಗೆ ಆತ್ಮ ಸ್ವಭಾವದ ಮಾತು ರುಚಿಸುವುದೇ ಇಲ್ಲ.

ಭಗವಾನ ಆತ್ಮನು ಶುದ್ಧ ಆನಂದದ ಪುಂಜನಿದ್ದು ಇವನನ್ನು ಯಾರೋ ಓರ್ವ ಪಂಡಿತ ಜನರೇ ತಿಳಿದುಕೊಳ್ಳುತ್ತಾರೆ. ಶುದ್ಧ ಆತ್ಮ ತತ್ತ್ವದ ಮಾತನ್ನು ಕೇಳುವವರಂತೂ ಎಲ್ಲಿಯೋ ಒಬ್ಬಿಬ್ಬರು ವಿರಳರಾಗಿಯೇ ಇರುತ್ತಾರೆ. ಆತ್ಮತತ್ತ್ವದ ಧ್ಯಾನ ಮಾಡುವವರು ಕೂಡ ತೀರ ವಿರಳರಾಗಿಯೇ ಇರುತ್ತಾರೆ.

ಅಂತರ್ಯದಲ್ಲಿ ಭಗವಾನ ಆತ್ಮನ ಕಡೆಗೆ ಪ್ರವೃತ್ತಿ ಮಾಡಿ, ಸ್ವರೂಪವನ್ನು ಧ್ಯೇಯವನ್ನಾಗಿ ಮಾಡಿಕೊಂಡು ಅದರ ಧ್ಯಾನ ಮಾಡುವಂಥ ಜೀವರುಗಳು ವಿರಳವಾಗಿಯೇ ಇದ್ದಾರೆ. ಪುಣ್ಯ ಮಾಡುವುದು ಅಥವಾ ಅದರ ಫಲದಲ್ಲಿ ಇಂದ್ರ -ಚಕ್ರವರ್ತಿ ಮೊದಲಾದ ಪದಗಳು ದೊರಕುವುದು ದುರ್ಲಭವೆಂದು ಹೇಳಲಿಲ್ಲ, ಆದರೆ ಆತ್ಮನ ಧ್ಯಾನ ಮಾಡುವುದು ದುರ್ಲಭವಿದೆಯೆಂದು ಹೇಳಲಾಗಿದೆ. ಆದುದರಿಂದ ಧ್ಯಾನ ಮಾಡುವಂಥ ಜೀವರುಗಳು ಜಗತ್ತಿನಲ್ಲಿ ದುರ್ಲಭರಿದ್ದಾರೆ. ರಾಗರಹಿತ ವೀತರಾಗ ಆತ್ಮನ ವೀತರಾಗ ಪರಿಣತಿಯನ್ನು ಪ್ರಕಟ ಮಾಡಿ ಅದನ್ನು ಧಾರಣ ಮಾಡುವುದು ಮಹಾದುರ್ಲಭವಿದೆ. ಈ ಧಾರಣವನ್ನು ಸ್ಮೃತಿಯಲ್ಲಿ ತಂದುಕೊಂಡು ಪುನಃ ಪುನಃ ಅನುಭವ ಮಾಡುವಂಥ ಜೀವರುಗಳು ಅತ್ಯಂತ-ಅತ್ಯಂತ ವಿರಳರಾಗಿದ್ದಾರೆ. ಇದು ಸರ್ವಜ್ಞ ಭಗವಂತರ ದಿವ್ಯಧ್ವನಿಯಲ್ಲಿ ಬಂದಂಥ ಮಾತು ಇದೆ.

ಶಾಸ್ತ್ರಗಳ ಧಾರಣ ಶ್ಲೋಕಗಳ ಧಾರಣ ಮಾಡುವಂಥವರಂತೂ ಜಗತ್ತಿನಲ್ಲಿ ಬಹಳಷ್ಟು ಜನರು ಇದ್ದಾರೆ. ಆದರೆ ಸಮ್ಯಗ್ದರ್ಶನ-ಜ್ಞಾನದಲ್ಲಿ ಎಂದರೆ ಅನುಭವದಲ್ಲಿ ಯಾವ ಆತ್ಮನು ಬರುತ್ತಾನೆ ಅವನ ಧಾರಣ ಮಾಡುವಂಥ ಜೀವರುಗಳು ಮಾತ್ರ ತೀರ ಕಡಮೆಯಿದ್ದಾರೆ. ಆದುದರಿಂದ ಅತ್ಯಲ್ಪ ಜೀವರುಗಳು ಈ ಅನುಪಮ ತತ್ತ್ವದ ಲಾಭ ಪಡೆಯುವ ಸಾಧ್ಯತೆಯಿದೆ. ಏಕೆಂದರೆ ಮನರಹಿತ ಅಸಂಜ್ಞೀ ಪಂಚೇಂದ್ರಿಯದ ಜೀವರುಗಳಲ್ಲಂತೂ ವಿಚಾರ ಮಾಡುವ ಶಕ್ತಿಯೇ ಇರುವುದಿಲ್ಲ, ಮತ್ತು ಸಂಜ್ಞೀ ಪಂಚೇಂದ್ರಿಯ ಜೀವರುಗಳಲ್ಲಿ ನಾರಕಿಗಳಂತೂ ಹಗಲಿರುಳು ಕಷಾಯದ ಕಾರ್ಯಗಳಲ್ಲಿಯೇ ತೊಡಗಿರುತ್ತಾರೆ. ಪಶುಗಳಲ್ಲಿ ಕೂಡ ಆತ್ಮ ಜ್ಞಾನ ಪಡೆಯುವುದು ಅತ್ಯಂತ ದುರ್ಲಭವಿದೆ. ದೇವಗಳಲ್ಲಿ ವಿಷಯಗಳ ತೀವ್ರತೆಯಿದ್ದು ವೈರಾಗ್ಯ-ಭಾವನೆಯ ದುರ್ಲಭತೆಯಿದೆ.

ಮನುಷ್ಯ ಗತಿಯಲ್ಲಿಯೇ ಆತ್ಮಜ್ಞಾನದ ಪ್ರಾಪ್ತಿಯ ಸಾಧನವು ಸುಲಭವಿದೆ. ಆದಾಗ್ಯೂ ಅದರ ಪ್ರಾಪ್ತಿಯು ಅತ್ಯಂತ ದುರ್ಲಭವಿದೆ. ಏಕೆಂದರೆ ಮನುಷ್ಯರಲ್ಲಿ ಅದೆಷ್ಟೋ ಜನರಂತೂ ಹಗಲಿರುಳು ಶರೀರದ ಅನುಕೂಲತೆಯನ್ನು ಕಾಯ್ದುಕೊಳ್ಳುವುದರಲ್ಲಿಯೇ ತೊಡಗಿರುತ್ತಾರೆ. ವ್ಯವಹಾರದ ಅಭಿರುಚಿಯುಳ್ಳ ಅದೆಷ್ಟೋ ಜನರು ವ್ಯವಹಾರದ